Indian Journal of History and Archaeology

ISSN (E):2582-225X
VOL-1 ISSUE 5, JAN-FEB, 2020, 20-28

# ಸ್ವಚ್ಛಗಾರ ಸ್ವಚ್ಛಮನಸ್ಸಿನ ಪೌರಕಾರ್ಮಿಕರು

**ಡಾ.ಎಂ.ರಾಚಪ್ಪಾಜಿ**

**ಡಾ.ಎಂ.ರಾಚಪ್ಪಾಜಿ**
ಅಧ್ಯಾಪಕರು
ಡಾ.ಬಿ.ಆರ್.ಅಂಬೇಡ್ಕರ್
ಸಂಶೋಧನ ಹಾಗೂವಿಸ್ತರಣ ಕೇಂದ್ರ
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು

ಜಗತ್ತಿನ ಯಾವುದೇ ಒಂದು ಭಾಗದ ಭೂಪ್ರದೇಶವು ಜನವಸತಿಯಿಂದ ಹಾಗೂ ನಾಗರಿಕ ಜನಸಮುದಾಯದಿಂದ ಕೂಡಿದ್ದರೆ, ಆ ಭೂಪ್ರದೇಶವನ್ನು ನಾಗರಿಕ ಜಗತ್ತು ಎಂದು ಗುರುತಿಸಬಹುದು. ಇಂಥ ನಾಗರಿಕ ಜಗತ್ತು ಸದಾಕಾಲವೂ ಆರೋಗ್ಯಕರವಾಗಿ ಹಾಗೂ ಸ್ವಚ್ಛಂಥವಾಗಿ ಇರಬೇಕಾದರೆ ಅಲ್ಲಿನ ಪರಿಸರವು ಪರಿಶುದ್ಧವಾಗಿಯೇ ಇರಬೇಕಾಗಿರುತ್ತದೆ. ಹೀಗೆ, ಜನವಸತಿಯಿಂದ ಅವೃತ್ತವಾಗಿರುವಂಥ ಪ್ರದೇಶವು ಶುಚಿಯಾಗಿ ಹಾಗೂ ಸ್ವಚ್ಛಾವಾಗಿದೆ ಎಂದು ಗುರುತಿಸಿದ ಸಂದರ್ಭದಲ್ಲಿ ಆ ಸ್ವಚ್ಛತೆಯಿಂದೆ ಅದನ್ನು ಸ್ವಚ್ಛಮಾಡಿದ ಸಹಸ್ರಾರು ಸ್ವಚ್ಛ ವ್ಯಕ್ತಿತ್ವಗಳು ಮತ್ತು ಅವರ ಮನಸ್ಸುಗಳ ಪರಿಶ್ರಮವು ಇದ್ದೆ ಇರುತ್ತದೆ ಎಂಬುದನ್ನು ಯಾವುದೇ ಕಾರಣಕ್ಕೂ ಕಡೆಗಣಿಸುವಂತಿಲ್ಲ. ಯಾವುದೇ ಒಂದು ಪ್ರದೇಶದಲ್ಲಿ ಸ್ಥಾಪಿತಗೊಂಡಿರುವ ಒಂದು ಕೇರಿ, ಬೀದಿ, ಹಳ್ಳಿಯನ್ನು, ಊರನ್ನು, ಗ್ರಾಮವನ್ನು, ಪಟ್ಟಣವನ್ನು, ಬಡಾವಣೆಯನ್ನು, ನಗರವನ್ನು ಹಾಗೂ ಮಹಾನಗರವನ್ನು ಪ್ರತಿನಿತ್ಯ ಶೃಂಗಾರಗೊಳ್ಳುವುದು ಅದರ ಹಿಂದೆ ಕಾರ್ಯನಿರ್ವಹಿಸಿದ ಮನಸ್ಸಿನ ಪರಿಶುದ್ಧತೆಯನ್ನು ಪ್ರಧಾನವಾಗಿ ಪ್ರತಿಪಾದಿಸಿತ್ತದೆ.

'ದಲಿತ್ ಪ್ಯಾಂಥರ್ಸ್ ಸಂಘಟನೆ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಕ.ದ.ಸಂ.ಸ.) ಗಳ ಸ್ಥಾಪನೆಯ ಐತಿಹಾಸಿಕ ಹಿನ್ನಲೆ', 'ಇವುಗಳ ಮೇಲೆ ಬ್ಲಾಕ್ ಪ್ಯಾಂಥರ್ಸ್ ಹಾಗೂ ಭೀಮಸೇನೆ ಸಂಘಟನೆಗಳ ಪ್ರಭಾವ', 'ಇವುಗಳ ನೇತೃತ್ವದಲ್ಲಿ ಸಾಂಸ್ಕೃತಿಕ ಚಳವಳಿಯಾದ ದಲಿತ ಚಳವಳಿ' ಮತ್ತು 'ದಲಿತ್ ಪ್ಯಾಂಥರ್ಸ್ ಹಾಗೂ ಕ.ದ.ಸಂ.ಸ.ಗಳ ಮೇಲೆ ಬೀಸಿದ ವಿಘಟನೆಯ ಬಿರುಗಾಳಿ' ಕುರಿತಾಗಿ ತಿಳಿಸಲು ಪ್ರಯತ್ನಿಸಿದ್ದೇನೆ

ನಗರವನ್ನು ಸ್ವಚ್ಛಗೊಳಿಸುವ ಸ್ವಚ್ಛಗಾರರು ಉಡುವ ಹಾಗೂ ತೊಡುವ ಬಟ್ಟೆಗಳು ಕೊಳಕು ಮತ್ತು ತೆಪೆಗಳೇ ಆಗಿರಬಹುದು. ಆದರೆ, ಆ ಜನರ ಮನಸ್ಸು ಮತ್ತು

ನಡೆ-ನುಡಿಯು ಮಾತ್ರ ವಜ್ರದಷ್ಟು ಪರಿಶುದ್ಧವೇ ಆಗಿರುತ್ತದೆ. ನಾಗರಿಕ ಜಗತ್ತಿನಲ್ಲಿ ನಾಗರಿಕರು, ಸಜ್ಜನರು ಎಂದು ತಮಗೆ ತಾವೇ ಪ್ರಮಾಣಪತ್ರಕ್ಕೆ ಸಹಿಮಾಡಿಕೊಂಡು ಘೋಷಿಸಿಕೊಂಡಿದ್ದಾರೆ. ಈ ಸ್ವಯಂ ಘೋಷಿತ ಜನರು ಧರಿಸುವ ಬಟ್ಟೆಗಳು ಮಾತ್ರ ಶುದ್ಧವಾಗಿ ಗರಿಗರಿಯಾಗಿಯೇ ಇರಬಹುದು. ಆದರೆ, ಆ ಶುದ್ಧ ಬಟ್ಟೆಯ ಜನರ ಮನಸ್ಸಿನಲ್ಲಿ ಬರಿಮಲವೇ ತುಂಬಿರುತ್ತದೆ. ಇಂಥ ಜನರು ತಮ್ಮ ಮನಸ್ಸು ಮತ್ತು ತಲೆಯಲ್ಲಿರುವಂಥ ಮಲವನ್ನು ಪರಿಶುದ್ಧಗೊಳಿಸಿಕೊಳ್ಳದೇ, ನಗರವನ್ನು ಶುದ್ಧಗೊಳಸುವ ನಗರ ಬಂಧುಗಳನ್ನು ಕೊಳಕು ಎಂದು ನಿಂಧಿಸಿ, ಅವರನ್ನು ಮನುಷ್ಯರು ವಾಸಮಾಡಲಿಕ್ಕೆ ಯೋಗ್ಯವಲ್ಲದ ಕೊಳಚೆ ಪ್ರದೇಶಗಳಲಿ ಬದುಕನ್ನು ಕಳೆಯುವಂತೆ ಮಾಡಿದಾಗಲು ಅವರ ವಿರುದ್ಧ ಒಂದು ಕೊಂಕು ಮಾತನಾಡದ ಸ್ವಚ್ಛಮನಸ್ಸಿನ ಸ್ವಚ್ಛಗಾರರು.

ಭಾರತವು ವಿಶ್ವದಲ್ಲಿಯೇ ಭವ್ಯ ಪರಂಪರೆಯನ್ನು ಹೊಂದಿರುವ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಲ್ಲಿ ಬುದ್ಧಗುರುವನ್ನು ಪ್ರಧಾನವಾಗಿಸಿಕೊಂಡಂತೆ ಅನೇಕ ಸಮಾಜ ಸುಧಾರಕರು, ಸಾಧು, ಸಂತರ ಒಂದು ಬಹುದೊಡ್ಡದಾದ ಪರಂಪರೆಯೇ ಉದಯಗೊಂಡಿತ್ತು. ಈ ಎಲ್ಲ ಮಹಾಶಯರು ತಮ್ಮ ಹೋರಾಟ, ತತ್ವ ಚಿಂತನೆ, ಆದರ್ಶಗಳಲ್ಲಿ ಪ್ರೀತಿ, ಮಮತೆ, ಕಾರುಣ್ಯ, ಅಹಿಂಸೆ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಪ್ರಧಾನವಾಗಿ ಪ್ರತಿಪಾದಿಸಿ, ಅದನ್ನೇ ಒಂದು ಸಿದ್ಧಾಂತದ ರೂಪದಲ್ಲಿ ಬೋಧಿಸಿ ಹೋಗಿದ್ದಾರೆ. ಇಂಥ ಆದರ್ಶನೀಯ ತತ್ವಗಳಿರುವ ಭಾರತವು ಜಾಗತಿಕ ಸಂದರ್ಭದಲ್ಲಿಯೂ ಕೂಡ ತನ್ನದೇ ಆದಂಥ ಛಾಪಿನ ಮುದ್ರೆ ಹಾಕಿ ಈ ಮುಖೇನ ಒಂದು ಶ್ರೇಷ್ಠಮಟ್ಟದ ಘನತೆ ಹಾಗೂ ಸ್ಥಾನ-ಮಾನವನ್ನು ಸೃಷ್ಟಿಸಿಕೊಂಡಿರುತ್ತದೆ. ಈ ಮಾದರಿಯಲ್ಲಿದ್ದಂಥ ಭಾರತದೊಳಗೆ, ಅಲೆಮಾರಿ ತನವನ್ನೇ ತಮ್ಮ ಜೀವನದ ಪ್ರವೃತ್ತಿಯಾಗಿಸಿಕೊಂಡು ತನ್ನ ಜಾನುವಾರುಗಳಿಗೆ ಅವಶ್ಯಕ ಆಹಾರ ಮತ್ತು ನೀರ'ನ್ನು ಪ್ರಧಾನವಾಗಿಯೇ ಹುಡುಕಿಕೊಂಡಿ ಭಾರತದ ಸಿಂಧೂ ನದಿ ಕಣಿವೆಯ ಕಡೆಗೆ ಬಂದರು. ಈ ಭೂಪ್ರದೇಶವು ಹುಲ್ಲುಗಾವಲಿನಿಂದ ಆವೃತ್ತಗೊಂಡಿತ್ತು. ಆದ್ದರಿಂದಲೇ ಆ ಅಲೆಮಾರಿಗಳು ಈ ಕಡೆಗೆ ಬಂದು, ಅಲ್ಲಿ ಅವರ ಅಗತ್ಯ ಹಾಗೂ ಅವಶ್ಯಕತೆಗೆ ಪರಿಸರವು ಇತ್ತು ಹಾಗಾಗಿಯೆ ಅಲ್ಲಿಯೇ ಬಿಡುಬಿಟ್ಟರು. ತಮ್ಮ ಸಾಕುಪ್ರಾಣಿಗಳ ಆಹಾರದ ಅವಶ್ಯಕತೆಯನ್ನು ಪೂರೈಸಲು ಬಂದಂಥ ಈ ಅಲ್ಪಸಂಖ್ಯೆಯ ಜನರು ಭಾರತೀಯ ನೆಲೆದ ಮೂಲನಿವಾಸಿ ಬಹುಜನರನ್ನು ಅದುವೇ ದೇವರು, ನಂಬಿಕೆ, ಮೂಢನಂಬಿಕೆ, ಪವಿತ್ರತೆ, ಅಪವಿತ್ರತೆ, ಶುದ್ಧ ಮತ್ತು ಅಶುದ್ಧ, ಮಲಿನತೆ ಎಂಬಂಥ ನಾನಾ ಕಾರಣಗಳಿಂದ ಹಂತ-ಹಂತವಾಗಿ ಶೋಷಣೆಗೆ ಗುರಿಮಾಡಿದರು.

ಭಾರತೀಯ ನೆಲದಲ್ಲಿ ಈ ಅಲೆಮಾರಿ ಪ್ರವೃತ್ತಿಯ ಅಸಮಾನ ಮನಸ್ಸಿನ ವೈದಿಕರ ಶೋಷಣೆಗೆ ಮತ್ತು ಕುತಂತ್ರಕ್ಕೆ ಒಳಗಾದವರು ಶೂದ್ರರು ಮತ್ತು ಅಂತ್ಯಜರು. ಅಂದರೆ, ಸಂವಿಧಾನದ ಅನ್ವಯ

ಹಿಂದುಳಿದ ಮತ್ತು ಅಸ್ಪೃಶ್ಯ ಜಾತಿಗಾಗಿ ಇವರು ಶ್ರೇಣೀಕೃತ ವ್ಯವಸ್ಥೆಯಲ್ಲಿ ಅತ್ಯಂತ ಕೆಳದರ್ಜೆಗೆ ಹೊರದೂಡಲ್ಪಟ್ಟಂಥ ಶೂದ್ರರು ಗುಲಾಮರಾದರು. ಹಾಗೆಯೇ, ಅಸ್ಪೃಶ್ಯರು ಊರಾಹೊರಗೆ ದೂಡಲ್ಪಟ್ಟರಾಗಿ ಯಾವುದೇ ಸವಲತ್ತುಗಳಿಲ್ಲದೆ ಬದುಕುವ ವರ್ಗವಾಗಿಯೇ ಗುರುತಿಸಿಕೊಂಡಿತ್ತು. ಆ ವರ್ಗದಲ್ಲಿ ಒಂದು ಭಾಗದ ಜನವರ್ಗದವರು ಊರ ಒಳಗಿನ ಸ್ವಚ್ಛಗೊಳಿಸುವ ಕಾರ್ಯಕ್ಕೆ ಸೀಮಿತಗೊಳಿಸಿದರು. ಆ ವರ್ಗವೇ ಸ್ವಚ್ಛಮನಸ್ಸಿನ ಸ್ವಚ್ಛಗಾರ ಪೌರಕಾರ್ಮಿಕರೇ ಆಗಿದ್ದಾರೆ. ಈ ವರ್ಗವನ್ನು ಸ್ವಚ್ಛತೆಗಾಗಿ ಸನಾತನಿಯರು ಭಾರತಕ್ಕೆ ಬಂದು ನೆಲೆಯೂರಿ, ಇಲ್ಲಿನ ಭವ್ಯಸಂಸ್ಕೃತಿ, ಬಾಂಧವ್ಯವನ್ನು ಸಹಿಸಲಾರದೇ ಒಂದೇ ಮನೆಯ ಸೋದರ ಬಂಧುಗಳನ್ನು ಒಡೆದು ನೂರಾರು ಜಾತಿ–ಜನರಾಗುವಂತೆ ಮಾಡಿದರು.

ಅನಾದಿ ಕಾಲದಿಂದಲೂ ಜಾತಿವ್ಯವಸ್ಥೆಯು ಸೃಷ್ಟಿಗೊಂಡು ಅದರ ಅನುಷ್ಠಾನದಿಂದ ಕೆಲವು ಜಾತಿಗಳು ಜಾತಿಯ ಏಣಿ–ಶ್ರೇಣೀಕೃತ ವ್ಯವಸ್ಥೆಯಲ್ಲಿ ಉನ್ನತ ಸ್ಥಾನವನ್ನು ಪಡೆದಿರುತ್ತವೆ. ಕೆಲವೇ ಕೆಲವು ಜಾತಿಗಳು ಕೆಳಸ್ಥಾನಕ್ಕೆ ಬಲವಂತವಾಗಿ ತಳ್ಳಲ್ಪಟ್ಟರುತ್ತವೆ. ಇದು ಪ್ರಧಾನವಾಗಿ ಋಗ್ವೇದ ಮತ್ತು ಸ್ಮೃತಿಗಳಲ್ಲಿ ಕಂಡುಬರುತ್ತವೆ. ಚಾತುರ್ವರ್ಣದ ಪ್ರಕಾರ ಭಾರತೀಯ ಸಮಾಜದಲ್ಲಿ ಒಬ್ಬ ವಿರಾಟ ಪುರುಷನ ಅಂಗಾಂಗಗಳಿಂದ ಬ್ರಾಹ್ಮಣ, ಕ್ಷೇತ್ರೀಯ, ವೈಶ್ಯ ಹಾಗೂ ಶೂದ್ರ ಎಂಬ ನಾಲ್ಕು ವರ್ಣಗಳಾಗಿ ಸೃಷ್ಠಿಯನ್ನು ಪಡೆದುಕೊಂಡಿರುತ್ತವೆ. ಅದರಂತೆಯೇ, ತಲೆಯಿಂದ ಬ್ರಾಹ್ಮಣ, ಭುಜದಿಂದ ಕ್ಷೇತ್ರೀಯ, ತೊಡೆಯಿಂದ ವೈಶ್ಯ ಮತ್ತು ಪಾದದಿಂದ ಶೂದ್ರ ಎಂಬ ವರ್ಗಗಳು ಅವೈಜ್ಞಾನಿಕವಾಗಿ ಮತ್ತು ವಿಜ್ಞಾನಕ್ಕೆ ಸವಾಲಾಗಿ ಜನ್ಮವನ್ನು ಪಡೆದಿರುವುದು ಪ್ರತಿಷ್ಠತೆಯೇ ಆಗಿರುತ್ತದೆ. ಇದೇ ಅಲ್ಲದೇ ಕರ್ಮಸಿದ್ಧಾಂತದ ಪ್ರಕಾರ; ತಲೆಯಿಂದ ಹುಟ್ಟಿರುವ ಬ್ರಾಹ್ಮಣರು ಜ್ಞಾನ ಮತ್ತು ಪೌರೋಹಿತ್ಯವನ್ನು, ಭುಜದಿಂದ ಹುಟ್ಟಿದ ಕ್ಷೇತ್ರೀಯರು ಅಧಿಕಾರ ಕೇಂದ್ರೀತವಾಗಿರುವಂಥ ರಾಜ್ಯಾಡಳಿತ ಮತ್ತು ಯುದ್ಧ–ರಕ್ಷಣಾ ಕಾರ್ಯಗಳನ್ನು, ತೊಡೆಯಿಂದ ಹುಟ್ಟಿದ ವೈಶ್ಯರು ವಾಪಾರೋದ್ಯಮ ಮತ್ತು ವ್ಯವಸಾಯಗಳಲ್ಲಿ ಹಾಗೂ ಪಾದದಿಂದ ಹುಟ್ಟಿದ ಶೂದ್ರರು ಈ ಮೇಲಿನ ಮೂರು ವರ್ಣದವರಿಗೆ ಉಚಿತವಾಗಿ ಸೇವಾ ಕಾರ್ಯವನ್ನು ಮಾಡುವಂತೆ ಬಲವಂತವಾದಂಥ ಒಂದು ನಿರ್ಭಂಧವನ್ನು ವೈದಿಕ ಸಮಾಜವು ವಿಧಿಸಿತ್ತು. ಇವರೆಲ್ಲರಿಗಿಂತಲೂ ದೂರ ಸರಿದಿದ್ದ ಅಸ್ಪೃಶ್ಯರು ಎಲ್ಲರಿಂದಲೂ ವಂಚಿತರಾಗಿ ಹೀನ ವೃತ್ತಿಯನ್ನು ಮಾಡುವಂತೆ ಮಾಡಲಾಗಿತ್ತದೆ.

ಆದ್ದರಿಂದಲೇ ಈ ರೀತಿಯಿಂದ ಸೃಷ್ಠಿಗೊಂಡಿರುವ ಶೂದ್ರರು ಸಮಾಜದಲ್ಲಿ ಮೇಲ್ವರ್ಗದ ಜನರ ಸೇವೆ ಮಾಡುವುದೇ ಇವರ ದಿನನಿತ್ಯದ ಕರ್ತವ್ಯದ ಬದುಕಾಗಿತ್ತು. ಇಂಥ ಕರ್ತವ್ಯ ನಿಷ್ಠರೆ, ಐದನೇಯ ವರ್ಣಕ್ಕೆ ದೂಡಲ್ಪಟ್ಟರು. ಆ ಮೂಲಕ ಅಸ್ಪೃಶ್ಯರಾದರು. ಅವರಲ್ಲಿಯೇ ಒಂದು ಭಾಗ ಮುಂದೆ ಸ್ವಚ್ಛಕಾರ್ಯದಲ್ಲಿ ನಿರತರಾಗಿದ್ದರು. ಈ ಜನಸಮುದಾಯವನ್ನೇ ಆಧುನಿಕ ಸಮಾಜದಲ್ಲಿ ಪೌರಕಾರ್ಮಿಕರು ಎಂಬುದಾಗಿ ಕರೆಯಲಾಗಿದೆ.

1948ರಲ್ಲಿ ಭಾರತದಲ್ಲಿ ವರ್ಣ ಮತ್ತು ಜಾತಿ ಎಂಬ ಸ್ಮೃತಿಗಳಲ್ಲಿ ಸೂಚಿಸಿರುವಂತೆ ಕೆಲವು ವೃತ್ತಿಗಳಾದ ಶೌಚಾಗೃಹಗಳನ್ನು ಶುಚಿಮಾಡುವುದು, ಬೀದಿಗುಡಿಸುವುದು, ಸತ್ತ ಪ್ರಾಣಿಗಳನ್ನು ಹೊರುವಂತ ಹಲವು ವೃತ್ತಿಗಳಲ್ಲಿ ಅನುವಂಶೀವಾಗಿಯೇ ತೊಡಗಿಕೊಂಡಿರುವವರನ್ನು ಅಸ್ಪೃಶ್ಯರು, ಅದರು ಪ್ರಧಾನವಾಗಿ ಪೌರಕಾರ್ಮಿಕರು ಎಂದು ಸಂಬೋಧಿಸಿರುವುದನ್ನು ತಿಳಿಯಬಹುದು. ಒಂದು ದುರಂತದ ಸಂಗತಿಯೆಂದರೆ; ಈ ಸ್ವಚ್ಛಾ ಕಾರ್ಯವನ್ನು ಅಸ್ಪೃಶ್ಯರೇ ಮಾಡುವ ಕಟ್ಟುನಿಟ್ಟಿನ ಕಾನೂನು-ಕಟ್ಟಳೆಗಳನ್ನು ಮಾಡಿದರು. ಆದ್ದರಿಂದಲೇ ಭಾರತೀಯ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯ ಸ್ವಚ್ಛಮನಸ್ಸಿನ ಸ್ವಚ್ಛಗಾರರು ಅಸ್ಪೃಶ್ಯರೇ ಆಗಿದ್ದಾರೆ.

ಭೌತಿಕ ಅಪಹರಣ ಮಲೀನತೆಯ ಕಳಂಕ ಪರಿಶಿಷ್ಟ ಜಾತಿಯಲ್ಲಿಯೇ ಕೆಲವು ಅಸ್ಪೃಶ್ಯ ಜಾತಿಯವರಿಗೆ ಮಾತ್ರ ಸಾಮಾಜಿಕ ಚಲನೆಯನ್ನು ಮೊಡಕುಗೊಳಿಸುತ್ತದೆ. ಇದೇ ಅಲ್ಲದೇ ಇವರನ್ನು ಸಮಾಜದ ಅತ್ಯಂತ ಕೆಳಸ್ಥಾನಕ್ಕೆ ಸೀಮಿತಗೊಳಿಸಿದೆ. ಇವರ ಜನಾಂಗೀಯವಾಗಿ ಸಂಖ್ಯೆಯಲ್ಲಿ ಹೆಚ್ಚಿದ್ದಾರೆ. ಆದರು ಭಾರತೀಯ ಅಸಮಾನತೆಯ ಮನಸ್ಸಿನವರಿಂದ ಗುಲಾಮರಾಗಿದ್ದಾರೆ. ಹಾಗೆಯೇ, ಎಷ್ಟೋ ಜನವಸತಿ ಪ್ರದೇಶಗಳಲ್ಲಿ ಇವರು ಸ್ಪರ್ಶಿಸಲಾಗದ ಮತ್ತು ನೋಡಲಾಗದ ಜನರೇ ಆಗಿದ್ದಾರೆ. ಈ ಜನರ ಮನಸ್ಸು ಎಷ್ಟು ಪರಿಶುದ್ಧವಾಗಿದೆ ಎಂದರೆ, ಇದ್ಯಾವುದನ್ನು ಪರಿಗಣನೆಗೆ ತೆಗೆದುಕೊಳ್ಳದೇ ತಮ್ಮ ದಿನನಿತ್ಯದ ಕಾಯಕವಾದ ಸ್ವಚ್ಛಕಾರ್ಯವನ್ನು ಸ್ವಚ್ಛಮನಸ್ಸಿನಿಂದ ಮಾಡುತ್ತಿದ್ದಾರೆ. ಇದೇ ಈ ಜನವರ್ಗದವರ ಅತಿದೊಡ್ಡ ಆಸ್ತಿ ಮತ್ತು ಗುಣವಂತ ಮನಸ್ಸು. ಆದರೆ, **ವಿವಿಧ ಅಂಗಾಗಳಿಂದ ಹುಟ್ಟನ್ನು ಪಡೆದಿರುವವರಿಗೆ ಈ ಪರಿಯ ಗುಣವೇ ಬಂದಿಲ್ಲ. ಮತ್ತೇ ಬರುವುದು ಇಲ್ಲ. ಏಕೆಂದರೆ, ಅದರಲ್ಲೂ ಪ್ರಧಾನವಾಗಿ ತಲೆಯಿಂದ ಹುಟ್ಟನ್ನು ಪಡೆದವರಿಗೆ ತಾವು ಮಾತ್ರ ಶ್ರೇಷ್ಠರು ಇನ್ನೂಳಿದವರೆಲ್ಲ ಕನಿಷ್ಠರು ಎಂಬ ಧೋರಣೆ ಅವರ ನರನಾಡಿಗಳಲ್ಲಿದೆ. ಆದರಿಂದ ಪ್ರಸ್ತುತ ಇವರಿಂದಲೇ ಭಾರತಕ್ಕೆ ಹೆಚ್ಚು ತಲೆನೋವೆ ಆಗಿರುತ್ತದೆ** ಎಂಬುದನ್ನು ಯಾರು ಕಡೆಗಣಿಸುವಂತಿಲ್ಲ. ಮತ್ತೇ ಈ ವರ್ಗವು ದೇಶದ ಪ್ರಗತಿಯ ಮತ್ತು ಅಭಿವೃದ್ಧಿಯ ಕಟ್ಟ ವಿರೋಧಿಯೇ ಆಗಿರುತ್ತದೆ.

ಭಾರತದೊಳಗಿನ ಎಲ್ಲಾ ರಾಜ್ಯಗಳು ಹಾಗೂ ಕರ್ನಾಟಕ ರಾಜ್ಯವು ಇದರಿಂದ ಹೊರತಾಗಿಲ್ಲ. ಈ ಸ್ವಚ್ಛತೆಯ ವೃತ್ತಿಯನ್ನು ಜೀವನದ ಪ್ರಧಾನವಾದಂಥ ಭಾಗವಾಗಿಯೇ ತುಂಬು ಮನಸ್ಸಿನಿಂದಲೇ ಮಾಡುತ್ತಿರುವ ಪೌರಕಾರ್ಮಿಕರಿಗೆ ಯಾರು ತಾವು ಶ್ರೇಷ್ಠರು ಹಾಗೂ ಮಡಿ-ಮೈಲಿಗೆ-ಮಲಿನತೆಯನ್ನು ಪ್ರತಿಪಾದಿಸುತ್ತಾರೆ ಅವರು ಇವರನ್ನು ಕನಿಷ್ಠ ರೀತಿಯಲ್ಲಿ ಕಾಣುತ್ತಿದ್ದಾರೆ. ಆದರೂ ಇವರ ಮನಸ್ಸು ಯಾವುದನ್ನು ಪ್ರತಿಭಟಿಸದೇ ತಮ್ಮ ಒಡಲಲ್ಲಿಸಿಕೊಂಡು ಪ್ರತಿನಿತ್ಯವೂ ನಗರವನ್ನು ಸ್ವಚ್ಛಾಂದವಾಗಿಯೇ ಇಡುತ್ತಿದ್ದಾರೆ.

ಅದಕ್ಕೆ ಪ್ರಧಾನ ಮತ್ತು ಪೂರಕ ಸಾಕ್ಷಿಪ್ರಜ್ಞೆಯಿಂದಲೇ ನೋಡುವುದಾದರೆ; ಈ ಸ್ವಚ್ಛಗಾರರು ತಮ್ಮ ನಿಸರ್ಗ ಮತ್ತು ಸೌಂದರ್ಯ ಪ್ರೇಮವನ್ನು ಮೆರೆದಿದ್ದಾರೆ. ಮೈಸೂರು ನಗರವು ಇಂದು ಭಾರತದಲ್ಲಿಯೇ ಸ್ವಚ್ಛ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿ ಎರಡು ಬಾರಿ ಸ್ವಚ್ಛನಗರ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿಕೊಂಡಿದೆ. ಆದರೆ, ಮೈಸೂರು ನಗರವು ಮತ್ತೇ ತನ್ನ ಸ್ವಚ್ಛತೆಯಲ್ಲಿ ಪ್ರಥಮ ಸ್ಥಾನಗಳಿಸಿಕೊಳ್ಳಲು ಅಭಿಯಾನವನ್ನು ಆರಂಭಿಸಿದೆ. ದುರಂತವೆಂದರೆ, ಸ್ವಚ್ಛತೆಗೆ ಮೂಲ ಕಾರಣಕರ್ತರಾಗಿರುವ ಜನರನ್ನು ಮತ್ತು ಕಾಯಕ ಜೀವಿಗಳನ್ನು ಗಣನೆಗೆ ತೆಗೆದುಕೊಳ್ಳದೇ ಮಹಾಪೌರರು ಮತ್ತು ಆಯುಕ್ತರು ಮಾತ್ರ ಪ್ರಶಸ್ತಿ ಸ್ವೀಕರ ಮಾಡಿರುವುದು ಕೂಡ ಒಂದು ಮಾದರಿಯಲ್ಲಿ ಅವರ ಶ್ರೇಷ್ಠತೆಯನ್ನು ಹಾಗೂ ಶುದ್ಧತೆಯನ್ನು ಮೂಲಸೆಲೆಯಲ್ಲಿ ಪ್ರತಿಪಾದಿಸುತ್ತದೆ. ಮತ್ತೇ ಅವರ ಮನಃಸ್ಥಿತಿಯ ಧೋರಣೆಯು ಅನಾವರಣಗೊಂಡಿರುತ್ತದೆ.

ಮೈಸೂರು ನಗರವು ಭಾರತ ದೇಶದಲ್ಲಿಯೇ ೩ನೇಯ ಬಾರಿಗೆ ಸ್ವಚ್ಛಾ ನಗರದ ಅಭಿಯಾನದಲ್ಲಿರುವ ಈ ಕಾಲಸಂದರ್ಭದಲ್ಲಿ ಸ್ವಚ್ಛಗಾರರು ಮೈಸೂರು ನಗರದಲ್ಲಿ ೪೯ ಕೊಳೆಗೇರಿಗಳಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ. ಮೈಸೂರು ನಗರದ ವಿವಿಧ ಬಡಾವಣೆಗಳಲ್ಲಿಯೂ ಎಲ್ಲ ರೀತಿಯ ಮೂಲಭೂತ ಸೌಕರ್ಯಗಳ ಇರುತ್ತವೆ. ಇವುಗಳ ಬಗೆಗೆ ಪ್ರತಿ ಹಂತದಲ್ಲಿಯೂ ಸರ್ಕಾರ, ಪಾಲಿಕೆ ಮತ್ತು ಜನಪ್ರತಿನಿಧಿಗಳು ಗಮನಹರಿಸುತ್ತಿವೆ. ಆದರೆ, ನಗರವನ್ನು ಸ್ವಚ್ಛವಾಗಿಡುವ ಸ್ವಚ್ಛಗಾರರು ವಾಸಿಸುವ ೪೯ ಪ್ರದೇಶಗಳಿಗೆ ಚುನಾವಣೆಗಳ ಸಂದರ್ಭವನ್ನು ಹೊರತು ಪಡಿಸಿದರೆ, ಮತ್ಯಾವ ಸಂದರ್ಭದಲ್ಲಿಯೂ ಆ ಕಡೆ ಮುಖ ಮಾಡುವುದಿಲ್ಲ. ಹೋಗುವಂಥ ಸಂದರ್ಭವೂ ಇರುವುದಿಲ್ಲ. ಮತ್ತೇ ಈ ಪೌರಕಾರ್ಮಿಕರ ಬಗೆಗೆ ನೋಡುವಂಥ ಮನಸ್ಸನ್ನು ಕೂಡ ಮಾಡಿರುವುದಿಲ್ಲ. ಆದರೆ, ಸರ್ಕಾರ, ಜನಪ್ರತಿನಿಧಿಗಳು ವೇದಿಕೆಗಳು ಸಿಕ್ಕಾಗ ಮಾತ್ರ ನಾವು ಈ ಪೌರಕಾರ್ಮಿರ ಪರವಾಗಿದ್ದೇವೆ ಎಂದು ಮೈಕೂ ಕಿತ್ತುಬರುವವರೆಗೂ ಕೂಗಿ ಬೊಬ್ಬೆಹಾಕುತ್ತಾರೆ. ಅದು ವೇದಿಕೆಗೆ ಮಾತ್ರ ಸೀಮಿತವಾಗಿರುತ್ತದೆ. ಇದು ಒಂದು ಮಾದರಿಯಲ್ಲಿ ಒಲೈಕೆಯ ಮನೋವೃತ್ತಿಯೇ ಆಗಿರುತ್ತದೆ. ಆದ್ದರಿಂದ ಸರ್ಕಾರದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಈ ಜನವರ್ಗಗಳ ಬಗೆಗೆ ಮುಕ್ತ ಮನಸ್ಸು ಮತ್ತು ಕಣ್ಣನ್ನು ತೆರೆದು ನೋಡಬೇಕಾಗಿದೆ.

ಭಾರತವು ಸಾಂಪ್ರದಾಯಿಕ ದೇಶವಾಗಿದೆ. ಇದು ಅನೇಕ ರೀತಿಯ ಜಾತಿ–ಮತ–ಪಂಥಗಳಿಂದ ಕೂಡಿರುವ ದೇಶವೇ ಆಗಿರುತ್ತದೆ. ಇದು ತನ್ನದೇ ಆದಂಥ ಸಂಸ್ಕೃತಿ ಹಾಗೂ ಸಾಮಾಜಿಕ ನೆಲೆ–ಹಿನ್ನೆಲೆಯನ್ನು ಹೊಂದಿರುವ ದೇಶವೇ ಆಗಿದೆ. ಇಲ್ಲಿ ಪ್ರತಿಯೊಂದು ಜಾತಿ–ಮತ–ಪಂಥವು ಕೂಡ ತನ್ನದೇ ಆದ ಭಿನ್ನ–ವಿಭಿನ್ನ ರೀತಿಯಲ್ಲಿ ಆಚಾರ–ವಿಚಾರತೆಗಳನ್ನು ತಮ್ಮ ಒಡಲಲ್ಲಿರಿಸಿಕೊಂಡು ಬದುಕನ್ನು ಕಟ್ಟಿಕೊಂಡಿರುತ್ತವೆ. ಅದರಲ್ಲಿ ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾಗಿ ಪೌರಕಾರ್ಮಿಕರು ಪ್ರಧಾನವಾಗಿಯೇ ಇದ್ದಾರೆ.

ಭಾರತೀಯ ಸನಾತನೀಯ ಸ್ಮೃತಿಗಳಲ್ಲಿ ತಿಳಿಸಿರುವಂತೆ; ಕೆಲವೇ ಕೆಲವು ಜಾತಿಯ ಜನರು ಮಾತ್ರ ಇತರರ ಮಲ-ಮೂತ್ರ ಇನ್ನಿತರ ಹೊಲಸುಗಳನ್ನು ಶುಚಿಮಾಡುವುದು. ಬೀದಿಗುಡಿಸುವುದು, ಸತ್ತ ಪ್ರಾಣಿಗಳನ್ನು ಊರಹೊರಗೆ ಹೊಯ್ಯುವುದು, ಇಂಥ ವೃತ್ತಿಗಳಲ್ಲಿ ಅನುವಂಶಿಕವಾಗಿಯೇ ತೊಡಗಿರುವವರನ್ನು ಅಸ್ಪೃಶ್ಯರು ಅಥವಾ ಈ ವರ್ಗದಲ್ಲಿಯೇ ಕೆಲವು ಗುಂಪುಗಳನ್ನು ಪೌರಕಾರ್ಮಿಕರು ಅಥವಾ ಸ್ವಚ್ಛಗಾರರು ಎಂದು ಪ್ರತ್ಯೇಕಿಸಿ ಕರೆಯಲಾಗುತ್ತಿದೆ. ಸ್ವಚ್ಛಗಾರರು ಎಂದರೆ; ಹೊಲಸನ್ನು ಸಂಗ್ರಹಿಸುವಲ್ಲಿ, ಚರಂಡಿಗಳನ್ನು ಸ್ವಚ್ಛಗೊಳಿಸುವಲ್ಲಿ ನಿಯೋಜಿತಗೊಂಡಿರುವ ವ್ಯಕ್ತಿಗಳು. ಈ ಜನವರ್ಗದವರು ಶೈಕ್ಷಣೀಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಸಾಂಪ್ರಾದಾಯಿಕತೆಯನ್ನು ಅಳವಡಿಸಿಕೊಂಡು ಶೋಚನೆಯ ಸ್ಥಿತಿಯಲ್ಲಿ ಬದುಕನ್ನು ಕಟ್ಟಕೊಂದು ಸಾಗುತ್ತಿದ್ದಾರೆ. ಇದರಲ್ಲಿ ಅವರ ಮನಸ್ಸಿನ ದೊಡ್ಡತನವೂ ಪ್ರಧಾನವಾಗಿ ಪ್ರತಿಬಿಂಬಿತವಾಗುತ್ತದೆ. ಏಕೆಂದರೆ, ಈ ಜನವರ್ಗದವರನ್ನು ಶುಚಿತ್ವವನ್ನು ಕಾಪಾಡುವ ವೃತ್ತಿದೊಡಲ್ಪಟ್ಟ ದಿನದಿಂದಲೂ ಈ ವೃತ್ತಿಯನ್ನು ನಾವು ಮಾಡುವುದಿಲ್ಲವೆಂದು ಎಂದು ಪ್ರತಿಭಟಿಸಿದವರಲ್ಲ. ಇದು ಅವರ ಮಾನವೀಯ ಮನಸ್ಸಿನ ದೊಡ್ಡ ಗುಣವೇ ಆಗಿರುತ್ತದೆ.

ಸ್ವಚ್ಛ ಮನಸ್ಸಿನ ಸ್ವಚ್ಛಗಾರರನ್ನು ಸರ್ಕಾರಿ ಅಧೀನಿಯದ ಪ್ರಕಾರ ಪೌರಕಾರ್ಮಿಕರು ಎಂದು ಕರೆಯಲಾಗುತ್ತಿದೆ. ಈ ಪೌರಕಾರ್ಮಿಕರೆಂದರೆ; ಪ್ರಧಾನವಾಗಿ ನಗರ ಪ್ರದೇಶಗಳಲ್ಲಿರುವ ಹೊಲಸನ್ನು ತೆಗೆದು ಹಾಕುವ ಹಾಗೂ ಚರಂಡಿಗಳನ್ನು, ಕಸಾಯಿಖಾನೆಗಳನ್ನು ಶುದ್ಧಗೊಳಿಸುವವರು, ಬೇರೆ ಜನರು ಮಾಡುವ ಮಲ-ಮೂತ್ರವನ್ನು ಸ್ವಚ್ಛಗೊಳಿಸುವುದು. ಹೊಲಸನ್ನು ಹೊರಗಡೆ ತೆಗೆದುಕೊಂಡು ಹೋಗಿ ಶುದ್ಧತೆಯನ್ನು ಮಾಡುವವರು. ಇಂಥವರೇ ನಾಡಬಂಧುಗಳು ಹಾಗೂ ಪೌರಕಾರ್ಮಿಕರು. ಪೌರಕಾರ್ಮಿಕರನ್ನು ಭಂಗಿಗಳು ಎಂದು ಕರೆಯುವುದು ಉಂಟು. ನಮ್ಮ ಭಾರತ ದೇಶದಲ್ಲಿ ಈ ಭಂಗಿಗಳು ಎನ್ನುವಂಥ ಪದವು ಹೇಗೆ ಬಂದಿರುತ್ತದೆ ಎಂದು ಅಧ್ಯಯನ ಮಾಡಿದಾಗ; ಯಾರು ಸಮಾಜದಲ್ಲಿ ಸೃಷ್ಠಿಗೊಳ್ಳುವ ನಿಷೇಧಗಳನ್ನು ಭಂಗ ಮಾಡಿದ್ದರೋ, ಈ ನಿಷೇಧಗಳ ಬಗೆಗೆ ದಂಗೆ ಎದ್ದಿದ್ದರೋ ಅವರನ್ನು ಶೋಷಿಸುವ ಹುನ್ನಾರದಿಂದಲೇ ಭಂಗಿಗಳು ಎಂಬ ಹೆಸರಿನಿಂದ ಕರೆಯಲಾಗಿರುತ್ತದೆ. ಮತೀಯವಾದಿ ಶಕ್ತಿಗಳು ತಮ್ಮ ಹಿಡಿತವನ್ನು ಸಮಾಜದಲ್ಲಿ ಸಾಧಿಸುವ ಸಲುವಾಗಿಯೇ ಉದ್ದೇಶ ಪೂರಕವಾಗಿಯೇ ಕೆಲವು ನಿಷೇಧಗಳನ್ನು ಬಲವಂತವಾಗಿ ಹೇರಿದ್ದವು. ಇಂಥ ಅಸಂಬದ್ಧ ನಿಷೇಧಗಳ ವಿರುದ್ಧ ಸ್ವಾಭಿಮಾನಿ ಸ್ವಚ್ಛಗಾರ ಮನಸ್ಸಿನವರು ಗಟ್ಟಿಧ್ವನಿಯಿಂದ ಬಂಡಾಯ ಎದ್ದಿದ್ದರಿಂಲೇ ಈ ವರ್ಗದವರು ಭಂಗಿಗಳಾದರು. ಈ ಜನಸಮುದಾಯದವರು ತಾವು ಭಂಗಿಗಳಾಗಿರುವುದರ ಬಗೆಗೆ ಯಾವುದೇ ತರಹದಲ್ಲಿಯೂ ಅವಮಾನವನ್ನು ಪಡದೇ ಇರುವ ಸ್ವಚ್ಛಮನಸ್ಸಿನ ಸ್ವಚ್ಛಗಾರರು.

ಭಾರತೀಯ ಸಾಮಾಜಿಕ ವ್ಯವಸ್ಥೆಯ ಸಂದರ್ಭದಲ್ಲಿ ಅತ್ಯಂತ ಕಟ್ಟಕಡೆಯ ಶೋಷಿತ ಸಮುದಾಯವೆಂದೇ ಈ ಸ್ವಚ್ಛಗಾರ ವರ್ಗದವರನ್ನು ಗುರುತಿಸಲಾಗಿದೆ. ಏಕೆಂದರೆ, ಈ ದೇಶದಲ್ಲಿ ವರ್ಣವ್ಯವಸ್ಥೆಯು ತನ್ನ ಪ್ರತಿಷ್ಠೆತೆಯನ್ನು ಪ್ರತಿಪಾದಿಸುತ್ತುರುವುದರಿಂದ ಬ್ರಾಹ್ಮಣ, ಕ್ಷೇತ್ರೀಯ, ವೈಶ್ಯ, ಶೂದ್ರ ಹೀಗೆ, ನಾಲ್ಕು ಭಾಗವಾಗಿ ವಿಂಗಡಿಸಿರುವ ವ್ಯವಸ್ಥೆಯಲ್ಲಿ ಅಸ್ಪೃಶ್ಯರು ಈ ವರ್ಗಗಳಿಗಿಂತ ಐದನೇಯ ಸ್ಥಾನವನ್ನು ಪಡೆದು ಪಂಚಮರಾಗಿದ್ದಾರೆ. ಈ ಪಂಚಮರು ಶೋಷಿತ ಜನಾಂಗದವರಾಗಿರುವ ಕಾರಣವಾಗಿಯೇ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಅತ್ಯಂತ ಹಿಂದೆ ಉಳಿದಿದ್ದಾರೆ. ಇಂಥ ಅಸ್ಪೃಶ್ಯರಲ್ಲಿಯೇ ಅಸ್ಪೃಶ್ಯರಾಗಿರುವಂಥ ಜನವರ್ಗವೇ ಸ್ವಚ್ಛಮನಸ್ಸಿನ ಸ್ವಚ್ಛಗಾರರೇ ಆಗಿದ್ದಾರೆ.

ಅಂಬೇಡ್ಕರ್ ಅವರು ಕಾರ್ಮಿಕ ಕುಟುಂಬದ ಹಿನ್ನೆಲೆಯಿಂದ ಮತ್ತು ಆ ಪರಿಸರದಲ್ಲಿ ಬೆಳೆದು ಬಂದವರು. ಆದ್ದರಿಂದಲೇ ಅದರಲ್ಲೂ ಕಾರ್ಮಿಕರಲ್ಲಿಯೇ ಪ್ರಧಾನವಾಗಿ ತಳಮಟ್ಟದಲ್ಲಿರುವ ಸಮುದಾಯ ಪೌರಕಾರ್ಮಿಕರು. ಅಂಬೇಡ್ಕರ್ ಅವರು ಈ ಸಮುದಾಯವನ್ನು ಮತ್ತು ಸಮಾಜದಲ್ಲಿ ತುಳಿತಕ್ಕೆ ಒಳಪಟ್ಟಿರುವ ಜನವರ್ಗಗಳ ಏಳಿಗೆಗಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟಿದ್ದರು. ಎಲ್ಲಿಯವರೆಗೆ ದಮನಕ್ಕೆ ಒಳಪಡುವ ಜನವರ್ಗಗಳಿಗೆ ಸಮಪಾಲು, ಸಮಬಾಳು ಸಿಗುವುದಿಲ್ಲವೋ ಅಲ್ಲಿಯವರೆಗೂ ಸಮಾಜವು ಅಭಿವೃದ್ಧಿಯನ್ನು ಹೊಂದಲು ಸಾಧ್ಯವಾಗುವುದಿಲ್ಲವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಹಾಗೆಯೇ, ಕಟ್ಟ ಕಡೆಯ ಮನುಷ್ಯನು ಸ್ವತಂತ್ರವಾಗಿ ಸಮಾನತೆಯಿಂದ ಬದುಕಲು ಮತ್ತು ಅದನ್ನು ಕಲ್ಪಿಸಿಕೊಟ್ಟು, ಅವರ ಸಬಲೀಕರಣಕ್ಕಾಗಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯನಂತರದಲ್ಲಿ ಬಹುದೊಡ್ಡ ಪ್ರಜಾಸತ್ತಾತ್ಮಕ ಹೋರಾಟವನ್ನೇ ಮಾಡಿದವರು. ಪೌರಕಾರ್ಮಿಕರಂಥ ಅನೇಕ ದಮನಿತ ಜನವರ್ಗಗಳಿಗೆ ಶಾಶ್ವತವಾದಂಥ ಜನತಂತ್ರ ವ್ಯವಸ್ಥೆಯಲ್ಲಿ ಸಂವಿಧಾನಾತ್ಮಕ ರಕ್ಷಣೆಗಳನ್ನು ಕೊಡಿಸಿರುವ ಮಾನವಹಕ್ಕುಗಳ ರಕ್ಷಕ ಅಂಬೇಡ್ಕರ್. ಆದರೆ, ಆ ರಕ್ಷಣೆಗಳನ್ನು ಕೊಡಮಾಡುವ ಆಯಾಕಟ್ಟಿನ ಸ್ಥಳಗಳಲ್ಲಿ ಅದರ ವಿರೋಧಿಗಳೇ ಆವರಿಸಿಕೊಂಡಿದ್ದಾರೆ. ಅಂಥವರನ್ನು ಅಧಿಕಾರದ ಗದ್ದುಗೆಯಿಂದಲೇ ದೂರ ಇಡುವ ಒಂದು ಘಟಬಂಧನ ಸೃಷ್ಠಿಗೊಳ್ಳಲೇ ಬೇಕು. ಇಲ್ಲವಾದರೆ, ಮುಂದಿನ ದಿನಗಳಲ್ಲಿ ಮತ್ತೇ ಮತ್ತೇ ಅಂಥ ವಿರೋಧಿಗಳೇ ಅಧಿಕಾರಕ್ಕೆ ಬಂದು ದಮನಿತರ ಹಕ್ಕು–ಅಧಿಕಾರಕ್ಕೆ ಮತ್ತಷ್ಟು ಧಕ್ಕೆ ತರುತ್ತಾರೆ. ಆದ್ದರಿಂದ ಭಾರತೀಯ ನೆಲದ ಹಿಂದುಳಿದ ಜಾತಿಗಳು, ಅಲ್ಪಸಂಖ್ಯಾತರು, ದಲಿತರು ಮತ್ತು ಜನಸಂಖ್ಯೆಯಲ್ಲಿ ಸಿಂಹಪಾಲಿರುವ ಮಹಿಳಾ ವರ್ಗವೂ ಒಂದು ವೇದಿಕೆಗೆ ಬರಬೇಕು. ಆವಾಗ ಮಾತ್ರ ಮಡಿವಂತಿಕೆಯ ಮತ್ತು ಸಂವಿಧಾನ ವಿರೋಧಿಗಳನ್ನು ದೂರವಿಟ್ಟು ದಮನಿತರನ್ನು ರಕ್ಷಿಸಬಹುದು.

ಗಾಂಧೀಜಿ ಅವರು **ನನ್ನ ಕನಸ್ಸಿನ ಭಾರತ** ಎಂಬ ಲೇಖನದಲ್ಲಿ **ಭಂಗಿಗೂ ರಾಷ್ಟ್ರಪತಿಗೂ ಯಾವುದೇ ಅಂತರ ಇರಬಾರದು ಅದು ನನ್ನ ಆಸೆ** ಎಂದು ಹೇಳಿದ್ದರು. ಆದರೆ, ಪ್ರಸ್ತುತ ಅಂತರ ಬಹಳ ಆಗಿದೆಯೆ ಹೊರತು ಕಡಿಮೆಯಂತು ಆಗಿರುವುದಿಲ್ಲ. ಗಾಂಧೀಜೀ ಅವರು ತಮ್ಮ ಹರಿಜನ ಪತ್ರಿಕೆಯ ಸಂಪಾದಕೀಯದಲ್ಲಿ ಬರೆಯುತ್ತಾ; **ವೈದ್ಯರು** ರೋಗಿಯನ್ನು ಶುಶ್ರೂತೆ ಮಾಡುತ್ತಾರೆ. ರೋಗಿಯ ಗಾಯವನ್ನು ತೊಳೆದು ಅದಕ್ಕೆ ಪಟ್ಟಿಯನ್ನು ಕಟ್ಟಿ, ರೋಗ ಮತ್ತು ಗಾಯದಿಂದ ಸಂಪೂರ್ಣ ಮುಕ್ತನನ್ನಾಗಿ, ಆತನನ್ನು ಪರಿಶುದ್ಧನನ್ನಾಗಿ ಮಾಡುತ್ತಾನೆ. ಆದ್ದರಿಂದ ಈ ಕಾರಣ ಮತ್ತು ಪರಿಣಾಮದಿಂದಾಯೇ ಆ ರೋಗಿಯು ವೈದ್ಯನನ್ನೂ ಕೃತಜ್ಞತೆ ಭಾವನೆಯಿಂದ ನೋಡುತ್ತಾನೆ. ಹಾಗೆಯೇ, ಪ್ರತಿಯೊಬ್ಬ ತಾಯಿಯು ತನ್ನ ಮಗುವಿನ ಮಲಿನತೆಯನ್ನು ತೊಳೆದು ಶುಚಿ ಮಾಡುತ್ತಾಳೆ. ತಾಯಿಯನ್ನು ಆ ಮಗು ಕೃತಜ್ಞತೆಯಿಂದ ನೋಡುತ್ತದೆ. ಆದರೆ, ಒಂದು ಪ್ರದೇಶವನ್ನು ಊರನ್ನು, ನಗರವನ್ನೂ ಶುಚಿ ಮಾಡುವ, ಅಲ್ಲಿನ ಮಲ-ಮೂತ್ರವನ್ನು ಸ್ವಚ್ಛಗೊಳಿಸುವ ಸ್ವಚ್ಛಗಾರರನ್ನು ಅಸಮಾನತೆಯ ಪ್ರತಿಪಾದಕ ಸಮಾಜವು ಏಕೆ ತಿರಸ್ಕಾರದಿಂದ ನೋಡುತ್ತದೆ? ಎಂದು ಸಮಾಜವನ್ನು ಪತ್ರಿಕೆಯ ಮೂಲಕ ಪ್ರಶ್ನೆ ಮಾಡಿದರು.

ಅಂಬೇಡ್ಕರ್ ಮತ್ತು ಗಾಂಧೀಜಿ ಅವರಂಥ ಜೀವಪರ ಮತ್ತು ಮಾನವಪರ ವ್ಯಕ್ತಿತ್ವಗಳ ಮನದಾಳದ ಮಾತು, ಸಮಸಮಾಜವನ್ನು ನಿರ್ಮಾಣಮಾಡುವ ಮಾತುಗಳು ಮತ್ತು ಪ್ರತಿಪಾದನೆಗಳೇ ಆಗಿದ್ದವು. ಆದ್ದರಿಂದ ಭಾರತದ ನಿರ್ಮಾತೃಗಳು ಯಾವುದನ್ನು ಬಯಸಿದ್ದರೋ ಅದು ಕನಸ್ಸಾಗಿಯೇ ಉಳಿದಿದೆ. ಅದನ್ನು ನನಸ್ಸು ಮಾಡುವ ಯಾವುದೇ ಮನಸ್ಸುಗಳು ಪ್ರಯತ್ನ ಪಟ್ಟಿಲ್ಲ. ಪ್ರಯತ್ನ ಪಟ್ಟರು ಅದನ್ನು ತಡೆಯುವ ಶಕ್ತಿಗಳು ಹಲವು ಸೃಷ್ಠಿಗೊಂಡು ಯಶಸ್ಸು ಕಂಡು ತನ್ನದೇ ಆದಂಥ ರೀತಿಯಲ್ಲಿ ನರ್ತಿಸುತ್ತಿವೆ. ಇಂಥ ಕಾಲಸಂದರ್ಭದಲ್ಲಿ ಸರ್ವರಿಗೂ ಸಮಪಾಲು-ಸಮಬಾಳು ಎಂದೂ ಬೋಧಿಸಿದ್ದ ತತ್ವವು ಗಾಳಿಗೆ ತೂರಿದೆ. ಅದರ ಕಾರಣ ಹಾಗೂ ಪರಿಣಾಮದಿಂದಾಗಿಯೇ ತಮ್ಮ ಸಹಮಾನವರನ್ನು ಕೀಳಾಗಿ, ಹೊಲಸು ಕೆಲಸಗಳನ್ನು ಮಾಡಲು ಒತ್ತಡ ತರುವುದು ಹೆಚ್ಚಾಗಿದೆ. ಇಲ್ಲಿ ದೇಹಕ್ಕೆ ಚಿಕಿತ್ಸೆ ಕೊಡುವ ಬದಲಿಗೆ ಮನಸ್ಸಿಗೆ ಚಿಕಿತ್ಸೆಯನ್ನು ಕೊಡಬೇಕು. ಅಂದರೆ, **ಮಂಗಗಳು ಕಟ್ಟಿರಬೇಕು ಎಂದು ಅಂದುಕೊಂಡಿರುವ ರಾಮಸೇತುವೆಯನ್ನು ಹುಡುಕುವ ಬದಲು, ಮನುಷ್ಯರೇ ಕಟ್ಟಬೇಕಾದ ಮಾನವೀಯತೆಯ ಸೇತುವೆಯನ್ನು ಕಟ್ಟಿದಾಗ ಮಾತ್ರವೇ ಎಲ್ಲರೂ ಒಂದು ಎಂಬ ಭಾವನೆ ಬರುತ್ತದೆ**. ಆವಾಗ ಮಾತ್ರ ಸ್ವಚ್ಛಮನಸ್ಸಿನ ಸ್ವಚ್ಛಗಾರರು ಕೂಡ ನಮ್ಮವರು ಎಂಬ ಭಾವನೆ ಬಂದು ಮನುಷ್ಯ-ಮನುಷ್ಯರ ನಡುವೆ ಇರುವ ಕಂದಕ ದೂರವಾಗುತ್ತದೆ.

**ಪರಾಮರ್ಶಿಸಿದ ಗ್ರಂಥಗಳು**

1. **ಕರ್ನಾಟಕ ಗೆಜಿಟಿಯರ್**, ಕರ್ನಾಟಕ ಸರ್ಕಾರ, 2001
2. **ನಾಗರಿಕ ಸಮಿತಿ ಕೈಪಿಡಿ- 2007 ರಿಂದ 2012,** ಮೈಸೂರು ಮಹಾನಗರ ಪಾಲಿಕೆ, 2008

3. **ಮೈಸೂರು ನಗರಾಭಿವೃದ್ಧಿ ವಿಚಾರ ಸಂಕಿರಣ**, ಕೆ.ಯು.ಐ.ಡಿ.ಎಫ್.ಸಿ, ಮೈಸೂರು ಮಹಾನಗರ ಪಾಲಿಕೆ, ೨೦೦೮
4. ಕರ್ನಾಟಕ ರಾಜ್ಯಪತ್ರ, ಅಕ್ಟೋಬರ್, ೨೦೦7, ನಗರಾಭಿವೃದ್ಧಿ ಸಚಿವಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦7
5. **ಕರ್ನಾಟಕ ಪೌರನಿಗಮಗಳ ಅಧಿನಿಯಮ–1976,** ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು
6. ರಘ, (ಸಂ), **ಪೌರಕಾರ್ಮಿಕರ ದುರಂತ ಬದುಕು,** ಭಂಗಿ ಬಂಧು, ಮಾಸ ಪತ್ರಿಕೆ, ಅಕ್ಟೋಬರ್, ೨೦೦5, ಮೈಸೂರು
7. ವೆಂಕಟರಾಮಪ್ಪ.ಕೆ.ಎನ್. ನಗರ ಸಮಸ್ಯೆಯಲ್ಲಿ ಕೊಳೆಗೇರಿಯ ಅಧ್ಯಯನಗಳು, ಸ್ಟರ್ಲಿಂಗ್ ಪಬ್ಲಿಷರ್ಸ್, ನವದೆಹಲಿ, 1972
8. ಪರಮೇಶ್ವರ್. ಎನ್, ಪೌರಕರ್ಮಿಕರ ಚೇತನ ಐ.ಪಿ.ಡಿ.ಸಾಲಪ್ಪ, ಸ್ನೇಹ ಪ್ರಿಂಟರ್ಸ್, ಬೆಂಗಳೂರು, ೨೦೦೮